# ಬಿತ್ತುವವನ ಕತೆ

ಸಮಾಜದ ದೃಷ್ಟಿಯಲ್ಲಿ ಎಲ್ಲಾ ಮಹಾತ್ಮರಂತೆ ಏಸುಕ್ರಿಸ್ತರೂ ಅವತಾರ ಪುರುಷ. ಕ್ರೈಸ್ತರು ನಂಬಿರುವಂತೆ ದೈವಾಂಶ ಸಂಭೂತ. ಮುಖ್ಯವಾಗಿ ಮನುಷ್ಯಕುಲದ ಒಳಿತಿಗಾಗಿ ತನ್ನನ್ನು ಬಲಿಕೊಟ್ಟುಕೊಳ್ಳಲೆಂದೇ ಹುಟ್ಟಿದ ಬಲಿಪಶು. ಕ್ರೈಸ್ತ ಪುರಾಣದ ಪ್ರಕಾರ ದಿವ್ಯವಾಣಿ, ದೇವಪುತ್ರ, ನಿರ್ದಿಷ್ಟ ಕಾರಣಕ್ಕಾಗಿ ಮಾನವ ಕುಲದಲ್ಲಿ ಹುಟ್ಟಿದ ದೇವ ಮಾನವ. ಕ್ರೈಸ್ತ ಧರ್ಮಶಾಸ್ತ್ರ ಪಂಡಿತರ ಪ್ರಕಾರ Son of god– ಈ ಎಲ್ಲಾ ಮಾತುಗಳು ಏಕಕಾಲಕ್ಕೆ ಹೌದು ಮತ್ತು ಅಲ್ಲ.

ಹುಟ್ಟಿನಿಂದ ಮರಣದವರೆಗೆ, ಮರಣದಿಂದ ದೇವನಾಗುವವರೆಗೆ ಕ್ರಿಸ್ತನ ಜೀವನವೆಲ್ಲವೂ ಪವಾಡಗಳಿಂದ ತುಂಬಿ ಹೋಗಿದೆ. ಬದುಕಿದ್ದಾಗಲೂ, ಸತ್ತ ನಂತರವೂ ಒಗಟಾಗಿಯೇ ಉಳಿದ ಕ್ರಿಸ್ತನ ಜೀವನವೇ ಭಕ್ತರ ಪಾಲಿಗೆ ಒಂದು ನಿಗೂಢ ಜಗತ್ತು. ಪ್ರಶ್ನಿಸಲಾಗದ ನಂಬಿಕೆಯ ಭದ್ರಕೋಟೆ. ಕ್ರಿಸ್ತನ ಸುತ್ತ ಹೆಣೆದ–ಬರೆದ ಕೃತಿಗಳು, ಚಿತ್ರಗಳು ಈ ಕೌತುಕವನ್ನು ನಾನಾ ರೀತಿಯಲ್ಲಿ ಕೆದಕಿವೆ. ಪ್ರಶ್ನೆಗಳನ್ನು ಎತ್ತಿವೆ. ಪುರಾಣಗಳ ಜೊತೆ ಹೆಣೆದು ಹೋದ ಎಲ್ಲಾ ದೈವಾಂಶ ಸಂಭೂತರ ಜೀವನ ಆರಂಭದಲ್ಲಿ ಕತೆಗಳಾಗುತ್ತಾ ಆ ನಂತರ ಪವಾಡದ ರೂಪ ಪಡೆಯುತ್ತವೆ.

ಈ ಮೇಲಿನ ಮಾತುಗಳೇನೇ ಇರಲಿ, ಎಲ್ಲಾ ಪವಾಡ ಪುರುಷರೂ ಜನಿಸುವುದು ಕಾಲದ ಅನಿವಾರ್ಯ ಒತ್ತಡಗಳಲ್ಲಿ ಮತ್ತು ಸಂಕಟಗಳಲ್ಲಿ. ಅಥವಾ ಚರಿತ್ರೆಯ ಸಂಕಟ ಮತ್ತು ಒತ್ತಡಗಳಲ್ಲಿ ಬದುಕುವವರಿಗೆ, ಕತ್ತಲಲ್ಲಿ ಮುಳುಗಿದವರಿಗೆ ಒಂದು ನಂಬಿಕೆಯ ಕೈಹಿಡಿದು ಮೇಲೆತ್ತಬೇಕಾದ ದೃಢವ್ಯಕ್ತಿತ್ವದ ಆಸರೆ ಬೇಕಿರುತ್ತದೆ ಎಂದೂ ಸಹ ಹೇಳಬಹುದು. ಈ ಅನಿವಾರ್ಯತೆಯ, ಶೂನ್ಯತೆಯ ತುಂಬಲೆಂದೇ ಮಹಾತ್ಮರು ಜನಿಸುತ್ತಾರೆ ಎಂಬುದು ಸಾಮಾನ್ಯ ನಂಬಿಕೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಈ ಮಹಾನ್ ವ್ಯಕ್ತಿಗಳೆಲ್ಲಾ ನಂಬಿಕೆಯ ಕೇಂದ್ರಗಳಾಗಿ ರೂಪುಗೊಂಡಿದ್ದು ಈ ಅರ್ಥದಲ್ಲಿಯೇ.

ಏಸುಕ್ರಿಸ್ತ ಆರಂಭದಲ್ಲಿ ಸಾಮಾನ್ಯ ಮನುಷ್ಯನಂತೆ ಬದುಕಿದವರು. ಒಬ್ಬ ಬಡಗಿಯಾಗಿ ತನ್ನ ಕುಲ ವೃತ್ತಿಯನ್ನು ಶ್ರದ್ಧೆಯಿಂದ ನಡೆಸುತ್ತಿದ್ದರು. ಯಹೂದಿಗಳ ಗುಲಾಮಿತನದ ಬದುಕು, ಅಧಿಕಾರ ವರ್ಗದವರ ಕೈಯಲ್ಲಿ ಅನುಭವಿಸುತ್ತಿದ್ದ ದೌರ್ಜನ್ಯ, ಜನಸಾಮಾನ್ಯರನ್ನು ಕಾಡುತ್ತಿದ್ದ ಮೂಢನಂಬಿಕೆಗಳು – ಇವೆಲ್ಲವೂ ಕ್ರಿಸ್ತರನ್ನು ಮತ್ತೆ ಮತ್ತೆ ಆಲೋಚಿಸುವಂತೆ ಮಾಡುತ್ತವೆ. ಏಕಕಾಲಕ್ಕೆ ಬಹಿರ್ಮುಖಿಯಾಗಿಯೂ ಅಂತರ್ಮುಖಿಯೂ ಆಗಿದ್ದ ಕ್ರಿಸ್ತ ಇದ್ದಕ್ಕಿದ್ದ ಹಾಗೆ ಪ್ರವಾದಿಯಂತೆ ಬಹಿರಂಗ ಸ್ಥಳಗಳಲ್ಲಿ ಭಾಷಣ ಮಾಡಬಲ್ಲವರಾಗಿದ್ದರು. ಮರುಕ್ಷಣದಲ್ಲಿ ಹೊಟ್ಟೆಪಾಡಿಗಾಗಿ ತನ್ನ ಬಡಗಿ ಕೆಲಸದಲ್ಲಿ ಮುಳುಗಬಲ್ಲವರಾಗಿದ್ದರು. ಕ್ರಮೇಣ ಅವರಿಗೆ ಅರಿವಾಗುವಂತೆ 'ತಮ್ಮನ್ನು ಕಾಯುವ ತಂದೆಯೇ ಒಬ್ಬ ಕುರುಬ, ಮಾನವರೆಲ್ಲರೂ ಅವನನ್ನು ಹಿಂಬಾಲಿಸುವ ಕುರಿಗಳು' ಎಂಬ ಭಾವವನ್ನು ಹೇಳಬಲ್ಲವರಾಗಿದ್ದರು. ದೇವಮಾನವರಾದ ನಂತರ 'ಕುರುಬ–ಕುರಿಗಳನ್ನು' ಕುರಿತು ಸಾಂಕೇತಿಕವಾಗಿ ಮಾತನಾಡಬಲ್ಲವರಾಗಿದ್ದರು. ಅವನ ಪ್ರಸಿದ್ಧ ಹೇಳಿಕೆ 'ಹಿಂಡಿನಲ್ಲಿ ನಿರಾತಂಕವಾಗಿ ಸಾಗುವ ಕುರಿಗಳಿಗಿಂತಲೂ, ಹಿಂಡಿನಿಂದ ಹೊರಗುಳಿದ ಒಂಟಿ ಕುರಿಯ ಕಡೆಗೆ ದೈವ ಹೆಚ್ಚು ಗಮನಕೊಡುತ್ತದೆ' ಎಂಬುದಾಗಿದೆ.

ತನ್ನ ನಂಬಿಕೆಯ ಹನ್ನೆರಡು ಜನ ಶಿಷ್ಯರೊಂದಿಗೆ ಸದಾ ಚಲಿಸುತ್ತಿದ್ದ ಕ್ರಿಸ್ತ ಹಲವಾರು ಪವಾಡಗಳನ್ನು ಮೆರೆದರು ಎಂದು ಬೈಬಲ್‌ನ ಹೊಸ ಒಡಂಬಡಿಕೆಯಲ್ಲಿ ವರ್ಣಿಸಲಾಗಿದೆ. ಹೊರ ನೋಟಕ್ಕೆ ಶಾಂತನೂ, ಬಲಿಯಾಗಲೆಂದೇ ಬಂದ ಬಲಿಪಶುವಿನಂತೆ ಕಂಡರೂ ಕ್ರಿಸ್ತ ಸ್ವಭಾವತಃ ಹಠವಾದಿಯಾಗಿದ್ದರು. ಕಂಡದ್ದನ್ನು ಕಂಡ ಹಾಗೆ ಹೇಳುತ್ತಿದ್ದರು. ತಾವು ಬೆಳೆಯುವುದಲ್ಲದೆ ಸುತ್ತಲಿನವರನ್ನು ವೈಚಾರಿಕವಾಗಿ ಬೆಳೆಸುತ್ತಿದ್ದರು. ನೊಂದವರಿಗಾಗಿ ತನ್ನ ತಂದೆತಾಯಿ, ಬಂಧು ಬಳಗ, ಮನೆ ಮಠ ಎಲ್ಲವನ್ನು ತೊರೆದ, ಅಷ್ಟೇಕೆ ಯಹೂದಿಯರ ಉದ್ಧಾರಕ್ಕೆಂದು ತನ್ನ ಬದುಕನ್ನೇ ಬಲಿ ಕೊಟ್ಟ.

ಕ್ರಿಸ್ತ ನಂಬಿಕೆ, ಅಪನಂಬಿಕೆಗಳಲ್ಲಿ, ಧಾರ್ಮಿಕ ಮೌಢ್ಯತೆಗಳಲ್ಲಿ, ಗುಲಾಮಿತನದಲ್ಲಿ ಮುಳುಗಿ ತನ್ನ ನಂಬಿದವರನ್ನು ಕುರಿತು ಸುಲಭವಾದ ಸರಳವಾದ ನೇರವಾದ ಭಾಷೆಯಲ್ಲಿ ಮಾತನಾಡಿದರು. ಅಲ್ಲಲ್ಲಿ ತಮ್ಮ ಸುತ್ತಮುತ್ತಲಿನ ಪರಿಸರಕ್ಕೆ ಹೊಂದುವಂತಹ ಸಣ್ಣ ಸಣ್ಣ ಕಥೆಗಳನ್ನು ಹೇಳುತ್ತಾ ಜನರ ಮನಸ್ಸನ್ನು ತಿದ್ದುತ್ತಾ ಹೋದರು. ಈ ರೀತಿಯ ಕತೆಗಳು ತಾವು ಹೇಳುವ ನೀತಿಗೆ ಸಾಮ್ಯತೆಯನ್ನು ಹೊಂದಿದ್ದು ಅವುಗಳನ್ನು ಸಾಮತಿ (Parable) ಗಳೆಂದು ಕರೆಯಲಾಯಿತು. ಅಂತಹ ಒಂದು ಸಾಮತಿ ಬಿತ್ತುವವನ ಕತೆ. ಇದು ಏಕಕಾಲಕ್ಕೆ ಕತೆಯೂ ಹೌದು, ನೀತಿ ಬೋಧನೆಯೂ ಹೌದು.

ಒಬ್ಬ ಕಾಳನ್ನು ಬಿತ್ತುವುದಕ್ಕೆ ಹೊರಟ. ಕೆಲವು ಬೀಜ ದಾರಿಯ ಪಕ್ಕದಲ್ಲಿ, ಕೆಲವು ಬಂಡೆಯ ಮೇಲೆ, ಕೆಲವು ಮುಳ್ಳಿನ ಪೊದೆಗಳ ನಡುವೆ, ಮತ್ತೆ ಕೆಲವು ಹದವಾಗಿ ಉತ್ತಭೂಮಿಯ ಮೇಲೆ ಬಿದ್ದವು. ದಾರಿಯ ಮಗ್ಗುಲಲ್ಲಿ ಬಿದ್ದ ಬೀಜಗಳು ಪಕ್ಷಿಗಳ ಪಾಲಾದವು. ಬಂಡೆಯ ಮೇಲೆ ಬಿದ್ದ ಬೀಜಗಳು ಅಲ್ಪಸ್ವಲ್ಪ ಮಣ್ಣಿನಿಂದಾಗಿ ಮೊಳೆತರೂ ಬಿಸಿಲಲ್ಲಿ ಬಾಡಿ ಒಣಗಿ ಹೋದವು. ಮುಳ್ಳು ಪೊದೆಗಳ ನಡುವೆ ಬಿದ್ದ ಬೀಜ ಮೊಳೆತರೂ ಬೆಳೆಯುವುದಕ್ಕೆ ಅವಕಾಶವಿಲ್ಲದೆ ಸೊರಗಿ ಹೋದವು. ಹಸನಾಗಿ ಬಿತ್ತಿದ ಭೂಮಿಯ ಮೇಲಿನ ಬೀಜ ಚೆನ್ನಾಗಿ ಮೊಳೆತು ಉತ್ತಮವಾದ ಫಲ ಕೊಟ್ಟವು.

ಈ ಕತೆಯನ್ನು ಸಾಮತಿ ರೂಪದಲ್ಲಿ ಕ್ರಿಸ್ತ ಹೇಳುವುದಲ್ಲದೆ ಶಿಷ್ಯರ ಕೋರಿಕೆಯ ಮೇಲೆ ಅದರ ಅರ್ಥವನ್ನು ಬಿಡಿಸಿ ಹೇಳುತ್ತಾರೆ. ಬಿತ್ತುವವನು ದೈವದ ವಾಕ್ಯಗಳನ್ನು ಬಿತ್ತುತ್ತಾನೆ. ಅದು ಸರಿಯಾದ ಜಾಗದಲ್ಲಿ ಹೇಳದೆ ಹೋದರೆ ಮಗ್ಗುಲಿನಲ್ಲಿಯೇ ಅಡಗಿ ಹೋಗುತ್ತದೆ. ಬಂಡೆಯಂತಹ ಕಲ್ಲು ಮನಸ್ಸಿನವರ ಮುಂದೆ ದೈವದ ಮಾತುಗಳನ್ನಾಡಿದರೆ ಅದು ವ್ಯರ್ಥವಾಗುತ್ತದೆ. ಪ್ರಾಪಂಚಿಕವಾದ ವಿಷಯಗಳಲ್ಲಿ ಮುಳುಗಿದವರ ಮುಂದೆ ಆಡಲ್ಪಟ್ಟ ಮಾತುಗಳು ತಲುಪುವ ಮೊದಲೇ ಇಲ್ಲವಾಗುತ್ತವೆ. ತೆರೆದ ಮನಸ್ಸಿನವರ ಮುಂದೆ ಆಡಿದ ಮಾತುಗಳು ಸಂಪೂರ್ಣವಾಗಿ ಎದೆಗೆ ನಾಟುತ್ತವೆ. ಇದನ್ನು ಮುಂದುವರೆಸಿ ಕ್ರಿಸ್ತ ಹೇಳುತ್ತಾರೆ, 'ಯಾರಿಗೆ ಸ್ವೀಕರಿಸುವ ಸಾಮರ್ಥ್ಯವಿದೆಯೋ ಅವನಿಗೆ ಇನ್ನಷ್ಟು ನೀಡಲಾಗುವುದು. ಯಾರಿಗೆ ಸ್ವೀಕರಿಸುವ ಸಾಮರ್ಥ್ಯವಿಲ್ಲವೋ ಅವನಿಂದ ಇರುವುದನ್ನು ಕಿತ್ತುಕೊಳ್ಳಲಾಗುವುದು'.

**■ ಅಮೃತಮತಿ**

## ಮಾತೇ ಮುತ್ತು

❖ ಇವತ್ತು ಏನನ್ನೇ ಆರಂಭಿಸಿದರೂ ಅದು ನಿಮ್ಮ ನಾಳೆಯನ್ನು ಉತ್ತಮಗೊಳಿಸುತ್ತದೆ

–ರಾಲ್ಫ್ ಮಾರ್ಸ್ಟೋನ್

❖ ಓದು ದೊಡ್ಡದು ಸರಿ, ಆದರೆ ಮನುಷ್ಯ ಓದಿ ಕಲಿಯುವುದಕ್ಕಿಂತ ಹೆಚ್ಚು ಸಂಗತಿಗಳನ್ನು ತಾನೇ ಬದುಕಿ ಕಲಿಯುತ್ತಾನೆ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

❖ ಸಂಸ್ಕೃತಿ ಸಾಕ್ಷರತೆಗಿಂತ ಉತ್ತಮ

–ಮಹಾತ್ಮ ಗಾಂಧೀಜಿ

❖ ಒಳ್ಳೆಯ ಕೆಲಸಗಳನ್ನು ಮಾಡುವುದು ಹಾಗೂ ಬೇರೆಯವರು ಅವನ್ನು ಮಾಡುವಂತೆ ಪ್ರೇರೇಪಿಸುವುದು ಮನುಷ್ಯನ ಕರ್ತವ್ಯ

–ಕುರಾನ್

❖ ಕಡಿಮೆ ಕಾನೂನುಗಳು, ಕಡಿಮೆ ಕೇಂದ್ರೀಕೃತ ಅಧಿಕಾರ, ಕಡಿಮೆ ಆಳುವ ಸರ್ಕಾರ ಇದ್ದಂತೆಲ್ಲಾ ಜನರಿಗೆ ಒಳ್ಳೆಯದು.

–ಎಮರ್ಸನ್

❖ ಧರ್ಮವೆಂದರೆ ಕೇವಲ ನಂಬಿಕೆಯಲ್ಲ; ಒಳ್ಳೆಯ ನಡವಳಿಕೆ.

–ರಾಧಾಕೃಷ್ಣನ್

❖ ಯುದ್ಧ ಕೆಟ್ಟವನನ್ನು ನಾಶ ಮಾಡುವುದಿಲ್ಲ. ಒಳ್ಳೆಯವನನ್ನು ಸದಾ ನಾಶ ಮಾಡುತ್ತದೆ.

–ಸಾಫೋಕ್ಲಿಸ್

❖ ಮಕ್ಕಳಿಗೆ ಸ್ವಲ್ಪ ಪ್ರೀತಿ ತೋರಿಸಿ, ಅದು ಹತ್ತು ಪಟ್ಟಾಗಿ ನಿಮಗೆ ಹಿಂತಿರುಗುತ್ತದೆ.

–ಜಾನ್ ರಸ್ಕಿನ್